ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ
**ಸಿ.ಸಿ.389/2022**

| | | |
|---|---|---|
| ಸಾಕ್ಷಿದಾರರ ಹೆಸರು | : ಹನುಮಂತ | ಫ್ರಾಸಾ -5 |
| ತಂದೆಯ ಹೆಸರು | : ದಂಡಿಯಪ್ಪ | ಚಾಸಾ-9 |
| ವಯಸ್ಸು | : 42 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಚಾಲಕ | ದಿನಾಂಕಃ12.02.2025 |
| ವಾಸಸ್ಥಳ | : ಮೂಡಿಗೆರೆ | |

:ಮುಖ್ಯ ವಿಚಾರಣೆ ಫ್ರಾಜ್ಞ್ಯಾ.ಸ.ಸ.ಅ. ರವರಿಂದ:

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ಅಷ್ಟಾಗಿ ನನಗಿಲ್ಲ. ಚಾಸಾ-1, 2 ಮತ್ತು 10 ರವರ ಪರಿಚಯ ನನಗಿದೆ.

ಸಾಕ್ಷಿಯು ನಿಪಿ-5 ರ ಮಹಜರ್ ನಲ್ಲಿ ತಮ್ಮ ಸಹಿಯನ್ನು ಗುರುತಿಸಿ, ನಿಪಿ-7 ರ ಫೋಟೋದಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-5(ಬಿ) ಎಂದು ಗುರುತಿಲಾಯಿತು. ಸಾಕ್ಷಿಯು ಎಂ.ಒ.3 ನ್ನು ನೋಡಿ ಗುರುತಿಸಿದ್ದು ಎಂ.ಒ.3 ರ ಮೇಲಿನ ಸಾಕ್ಷಿಯ ಸಹಿಯನ್ನು ಎಂ.ಒ.3(ಬಿ) ಎಂದು ಗುರುತಿಸಲಾಯಿತು.

ನಾನು ಮತ್ತು ಚಾಸಾ-10 ರವರು ಮೂಡಿಗೆರೆ ಪೋಲಿಸ್ ಠಾಣೆಯ ಮುಂದೆ ಹೋಗುತ್ತಿರುವಾಗ ಪೋಲಿಸರು ನಮ್ಮನ್ನು ಒಳಗೆ ಕರೆದು ನಮ್ಮ ಸಹಿಗಳನ್ನು ಪಡೆದು ಫೋಟೋ ತೆಗೆದಿರುತ್ತಾರೆ. ಎಂ.ಒ.3 ನ್ನು ನಿಪಿ-7 ರಲ್ಲಿ ಕಾಣುವ ಮಹಿಳೆಯೇ ಪೋಲಿಸರಿಗೆ ಕೊಟ್ಟು ಆರೋಪಿಯು ತನ್ನನ್ನು ಬಲತ್ಕಾರ ಮಾಡುವುದಕ್ಕೆ ಪ್ರಯತ್ನಿಸಿದ ಕಾರಣ ಕೀಟನಾಶಕ ಕುಡಿದಿರುವುದಾಗಿ ತಿಳಿಸಿದರು. ಮಹಜರ್ ನ್ನು ಬೆ.11.05 ರಿಂದ 12.00 ಗಂಟೆವರೆಗೂ ಬರೆಯಲಾಗಿದೆ.

ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ</u>
**<u>ಸಿ.ಸಿ.389/2022</u>**

| | | |
|---|---|---|
| ಸಾಕ್ಷಿದಾರರ ಹೆಸರು | : ಕೃಷ್ಣ ಕುಮಾರ್ | ಫ್ರಾಸಾ -4 |
| ತಂದೆಯ ಹೆಸರು | : ಸೋಮ | ಚಾಸಾ-7 |
| ವಯಸ್ಸು | : 40 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಕೂಲಿ | ದಿನಾಂಕಃ12.02.2025 |
| ವಾಸಸ್ಥಳ | : ಕಿತ್ತಲೆಗಂಡಿ | |

<u>:ಮುಖ್ಯ ವಿಚಾರಣೆ ಫ್ರಾಜ್ಞ್ಯಾ.ಸ.ಸ.ಅ. ರವರಿಂದ:</u>

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ನನಗಿದೆ. ಅವರು ನಮ್ಮ ಊರು ಮನೆಯವರು. ಚಾಸಾ-1 ಮತ್ತು 2 ರವರು ಸಹಾ ನಮ್ಮ ಊರಿನವರೆ.

ಸಾಕ್ಷಿಯು ನಿಪಿ-2 ರ ಮಹಜರ್ ನಲ್ಲಿ ತಮ್ಮ ಸಹಿಯನ್ನು ಗುರುತಿಸಿ, ನಿಪಿ-3 ರ ಪೋಟೋದಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಲಾಯಿತು. ಸಾಕ್ಷಿಯು ಎಂ.ಒ.1 ಮತ್ತು 2 ನ್ನು ನೋಡಿ ಗುರುತಿಸಿದ್ದು ಎಂ.ಒ.1 ರ ಮೇಲಿನ ಸಾಕ್ಷಿಯ ಸಹಿಯನ್ನು ಎಂ.ಒ.1(ಬಿ) ಎಂದು ಗುರುತಿಸಲಾಯಿತು.

ದಿ.04.12.2021 ರಂದು ಪೋಲಿಸರು ನಮ್ಮ ಊರಿಗೆ ಬಂದು ನನಗೆ ಮತ್ತು ಚಾಸಾ-8 ರವರಿಗೆ ನೋಟೀಸು ಕೊಟ್ಟು ಆರೋಪಿಯು ಚಾಸಾ-1 ರವರನ್ನು ಬಲತ್ಕಾರ ಮಾಡಲು ಪ್ರಯತ್ನಿಸಿದರು ಎಂದು ತಿಳಿಸಿ ಚಾಸಾ-2 ರವರ ಮನೆಗೆ ಕರೆದುಕೊಂಡು ಹೋಗಿ ಅಲ್ಲಿ ಕೊಟ್ಟಿಯಲ್ಲಿ ಬೆ.11.45 ರಿಂದ 12.45 ರವರೆಗೂ ಮಹಜರ್ ಬರೆದು ಪೋಟೋ ತೆಗೆದಿದ್ದಾರೆ. ಮಹಜರ್ ಕಾಲಕ್ಕೆ ಪೋಲಿಸರು ಚಾಸಾ-1 ರವರ ನೈಟಿ ವಶಕ್ಕೆಪಡೆದಿದ್ದಾರೆ. ಆ ನೈಟಿ ಎಂ.ಒ.2 ರ ನೈಟಿಯೇ ಆಗಿದೆ.

<u>ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.